Sri B. B. SAYANAK.—May I know how many men are posted for the security of the Chief Minister ?

Sri D. DEVARAJ URS.—The security guards are 6.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಷ್ಟ್ರದ ಒಬ್ಬ ಪ್ರಜೆಯ ನರಾನರಿ ವರಮಾನ 27 ಪೈಸೆ ಎಂದು ರೋಕಸಬೆಯಲ್ಲಿ ನಿರ್ಧಾರವಾಗಿದೆ. ತಾವು ಸರ್ಕಾರದ ಖಜಾನೆಯಿಂದ ಒಂದು ದಿನಕ್ಕೆ 811 ರೂಪಾಯಿ ಖರ್ಚು ಮಾಡುವುದನ್ನು ಕಡಿಮೆ ಮಾಡಿ ಸಾಧ್ಯವಾದಷ್ಟು ಜನರ ಹತ್ತಿರ ಹತ್ತಿರ ಇಳಿಯುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಡಿ. ದೇವರಾಜ ಅರಸ್.—ಜನರ ಹತ್ತಿರ ಹತ್ತಿರ ಇದ್ದೇವೆ ಎನ್ನುವುದು ಸಧ್ಯದಲ್ಲಿ ಎಲ್ಲರಿಗೂ ಗೊತ್ತಿದೆ, ತಮಗೂ ಗೊತ್ತಿರಬಹುದು. ಖರ್ಚು ಮಾಡುವುದು ನನ್ನ ವೈಯುಕ್ತಿಕವಾಗಿ ಅಲ್ಲ. ಚೀಫ್ ಮಿನಿಸ್ಟರ್ ಆದವನು ಸ್ಟೇಟ್‌ಗೋಸ್ಕರವಾಗಿ ಫಂಕ್ಷನ್ ಮಾಡುವುದು. ಚೀಫ್ ಮಿನಿಸ್ಟರ್ ಆಫ್ ಸ್ಟೇಟ್ ಎಂದು ಆ ಖರ್ಚು ಜನರಿಗೋಸ್ಕರ ಖರ್ಚು ಮಾಡಬೇಕಾಗಿರುವುದು.

Use of Play grounds and open spaces by R. S. S.

110. Sri M. S. KRISHNAN (Malleswaram).—

Will the Minister for Education be pleased to state.—

(*a*) whether it has come to the notice of Government that play grounds and open spaces in Government schools in different parts of the State are being used by the Rashtriya Swayam Sevak Sangh (R.S.S.) for conducting drills and such other activities ;

(*b*) the action the Government has taken or is contemplating to take to prevent the misuse of Government School premises by such organisations

Sri A. R. BADARINARAYANA (Minister for Education).—

(*a*) It is ascertained that in certain districts the R.S.S. is using open spaces of Schools for conducting physical training classes.

(*b*) Instructions have been issued that action as per rules may be taken in all such cases.

ಶ್ರೀ ಟಿ. ಎಂ. ಮಂಜುನಾಥ್.—ಬಹುತೇಕ ಗೌವರ್ನಮೆಂಟ್ ಸ್ಕೂಲು ಪ್ಲೇ ಗ್ರೌಂಡ್ಸ್ ಆರ್. ಎಸ್. ಎಸ್. ಪೆರೇಡ್‌ಗೆ ಉಪಯೋಗಿಸುತ್ತಿದ್ದಾರೆ. ರೂಲ್ಸ್ ಪ್ರಕಾರ ಕ್ರಮ ತೆಗೆದು ಕೊಳ್ಳುವುದಕ್ಕೆ ಏನಾದರೂ ಭಯವಾಗುತ್ತದೆಯೇ ? ಅವರಿಗೆ ಪೆರೇಡ್ ನಡೆಸಕೂಡದು ಎಂದು ಇನ್‌ಸ್ಟ್ರಕ್ಷನ್ ಇಷ್ಯು ಮಾಡಿದ್ದೀರಾ ?

†ಶ್ರೀ ಎ. ಆರ್. ಬದರಿನಾರಾಯಣ್.—ಡಿ. ಪಿ. ಐ., ಡೈರೆಕ್ಟರ್ ಆಫ್ ಕೊಲೀಜಿಯೇಟ್ ಎಜುಕೇಷನ್ ಮತ್ತು ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಸರ್‌ಕ್ಯೂಲರ್ ಇಷ್ಯೂ ಮಾಡಿ ಎಜುಕೇಷನ್ ಇನ್ಸ್‌ಟಿಟ್ಯೂಷನ್ಸ್, ಪೊಲಿಟಿಕಲ್ ಪಾರ್ಟೀಸ್ ರ್ಯಾಲೀಸ್ ಹೋಲ್ಡ್ ಮಾಡುವುದಕ್ಕೆ ಕೊಡಕೂಡದು ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಇನ್‌ಸ್ಟ್ರಕ್ಷನ್ ಯಾವ ಡೇಟಿಗೆ ಕೊಟ್ಟಿದ್ದೀರಿ ?

Sri A. R. BADARINARAYANA.—Instructions have been issued on 6th October 1969.

ಶ್ರೀ ಕೋಣಂದೂರು ಲಿಂಗಪ್ಪ.—ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪೊಲಿಟಿಕರ್ ಪಾರ್ಟಿಯೇ ?

Sri A. R. BADARINARAYANA.—The instructions given are : that the political institutions should not be permitted to hold rallies. The R. S. S. is also a political party.

ಶ್ರೀ ಕೋಣಂದೂರು ಲಿಂಗಪ್ಪ.—ರಾಷ್ಟ್ರೀಯ ಸ್ವಯಂಸೇವಕ ಸಂಘ ರಾಜಕೀಯ ಪಕ್ಷವಲ್ಲವೆಂದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎ. ಆರ್. ಬದರಿನಾರಾಯಣ್.—ಅದಕ್ಕೂ ಕೂಡ ಕೊಡಬಾರದು ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದೆ.

ಶ್ರೀ ಗಟ್ಟಿ ಚಂದ್ರಶೇಖರ್.—1969ರಲ್ಲಿ ಇನ್‌ಸ್ಟ್ರಕ್ಷನ್ ಕೊಟ್ಟಿದೆ ಎಂದು ಹೇಳಿದೆ. ಆದರ ಪ್ರಕಾರ ಕ್ರಮ ಕೈಕೊಂಡಿದ್ದಾರೆಯೇ ? ಕೈಗೊಂಡಿಲ್ಲದಿದ್ದರೆ ಯಾತಕ್ಕೆ ಕೈಕೊಂಡಿಲ್ಲ ಎಂದು ಹೇಳಬೇಕು.

ಶ್ರೀ ಎ. ಆರ್. ಬದರಿನಾರಾಯಣ್.—ಈಗ ಪರ್ಮಿಟ್ ಮಾಡುತ್ತಾ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ್. —ಮಕ್ಕಳಿಗೆ ಆಟಪಾಟಗಳು ಮುಖ್ಯ ಎಂದು ಗಮನಕ್ಕೆ ಬಂದಿದೆಯೇ ? ಈಗ ಇರತಕ್ಕ ಸನ್ನಿವೇಶದಲ್ಲಿ ಎಲ್ಲಾ ಪಾಠ ಶಾಲೆಗಳ ಮಕ್ಕಳ ಆಟಪಾಟಗಳಿಗೆ ಪ್ಲೇ ಗ್ರೌಂಡ್ ಕೊಡದೆ ಹೋದ ಪಕ್ಷದಲ್ಲಿ ಪ್ಲೇ ಗ್ರೌಂಡ್ ಕೊಟ್ಟು ಆ ಗ್ರಾಮದ ಮಕ್ಕಳು ಆಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಆಟಪಾಟಗಳನ್ನು ಆಡುವುದಕ್ಕೆ ಪ್ಲೇ ಗ್ರೌಂಡ್ ಎಷ್ಟಿರಬೇಕೆಂದು ನಿಗದಿ ಆಗಿದೆ. ಅದನ್ನು ದುರುಪಯೋಗ ಮಾಡುವ ಸಂದರ್ಭದಲ್ಲಿ ಆ ರೀತಿ ಮಾಡಕೂಡದೆಂದು ಪ್ರೊಹಿಬಿಟ್ ಮಾಡಿರತಕ್ಕದ್ದು ಇದೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಪರ್ಮಿಷನ್ ಕೊಡುತ್ತಾ ಇಲ್ಲ ಎಂದು ಮಂತ್ರಿಗಳು ಹೇಳಿದರು. 2 ತಿಂಗಳ ಹಿಂದೆ ತಿಪಟೂರು ಕಾಲೇಜಿನ ಅವರಣದಲ್ಲಿ ಸ್ಪೇಟ್ ಮಟ್ಟದ ರ್ಯಾಲಿ ನಡೆದಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—ನನ್ನ ಗಮನಕ್ಕೆ ಬಂದಿರತಕ್ಕದ್ದು. 15ನೇ ಜನವರಿ 72ರಲ್ಲಿ ಮಾತ್ರ ಒಂದು ಪರ್ಮಿಷನ್‌ನ್ನು ಕಲ್ಬುರ್ಗಿ ಫಂಕ್ಷನ್ನಿಗೆ ಕೇಳಿದ್ದರು. ಸಂಕ್ರಾಂತಿ ಡೇ ಸೆಲಬರೇಷನ್‌ಗೆ ಎಂದು ಸ್ಪೆಸಿಫಿಕ್ ಆಗಿ ಈ ವರ್ಷ ಪರ್ಮಿಷನ್ ಕೊಟ್ಟಿದೆ.

Sri B. B. SAYANAK.—May I know whether the R. S. S. Boys are using the Grounds after the School Hours or during the School Hours ?

Sri A. R. BADARINARAYANA.—I am not aware of the facts.

Development of Dharma Veera Horticultural Gardens

136. Sri N. BASAVAIAH (Chikkanayakanahally).—

Will the Minister for Agriculture and Forests be pleased to state :—

(*a*) the extent of land in acres proposed to be developed under "Dharmaveera Horticultural Gardens" at Bellara Gold Mines area in Chikkanayakanahally Taluk ;

(*b*) whether the Forest Department has released the land required for this purpose, if so, when ;

(*c*) whether there is any programme before the Government to give training in Horticulture in these gardens ;

(*d*) if so, the salient features of the training programme to be given ?